ಅ) ವಿವರಗಳು ಈ ರೀತಿ ಇದೆ.—

		೧೯೮೪-೮೫		೧೯೮೫-೮೬ (ಪ್ರಥಮ ೯ ತಿಂಗಳು)	
		ಮಾಲ್ಯ	ವಸೂಲಾದ ಕರ	ಮಾಲ್ಯ	ವಸೂಲಾದ ಕರ
		(ಕೋಟಿ ರೂ. ಗಳಲ್ಲಿ)		(ಕೋಟಿ ರೂ.ಗಳಲ್ಲಿ)	
೧	ಅಡಿಕೆ	೮೨-೯೭	೩-೬೦	೭೬-೪೫	೩-೮೦
೨	ಗೇರುಬೀಜ	೧೨.೮೨	೦-೬೭	೮-೩೨	೦-೩೨
೩	ತೆಂಗಿನಕಾಯಿ	೧-೯೩	೦-೦೨	೦-೮೧	೦-೦೧

ಆ) ಬಾಕಿ ಇರುವಕರ ವಿವರಗಳು ಹೀಗಿವೆ.

		೧೯೮೪-೮೫	೧೯೮೫-೮೬ (ಪ್ರಥಮ ೯ ತಿಂಗಳು)
೧	ಅಡಿಕೆ	ರೂ. ೧,೧೭,೦೦೦-೦೦	ರೂ. ೪೧,೩೦೦-೦೦
೨	ಗೇರುಬೀಜ	ರೂ. ೨೪,೬೦೦-೦೦	ಇಲ್ಲ
೩	ತೆಂಗಿನಕಾಯಿ	ಇಲ್ಲ	ಇಲ್ಲ

ಸಂಡೂರು ತಾಲ್ಲೂಕಿನಲ್ಲಿನ ಹಳ್ಳಿಗಳನ್ನು ಸಂಡೂರು ವಲಯವೆಂದು ಪರಿಗಣಿಸುವ ಬಗ್ಗೆ

೬೬೯. ಶ್ರೀ ಯು. ಭೂಪತಿ (ಸಂಡೂರು).— ಮಾನ್ಯ ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ಸಂಡೂರು ತಾಲ್ಲೂಕಿನಲ್ಲಿ ಎಷ್ಟು ಹಳ್ಳಿಗಳನ್ನು ಸಂಡೂರು ವಲಯವೆಂದು ಗೊತ್ತು ಪಡಿಸಲಾಗಿದೆ ?

ಆ) ಸಂಡೂರು ತಾಲ್ಲೂಕಿನ ಎಲ್ಲಾ ಹಳ್ಳಿಗಳನ್ನು ಸಂಡೂರಿನ ಅರಣ್ಯ ವಲಯ ಇಲಾಖೆಯು ಪರಿಗಣಿಸದೇ ಇರಲು ಕಾರಣಗಳೇನು ?

ಇ) ಸಂಡೂರು ತಾಲ್ಲೂಕನ್ನು ಸಂಡೂರು ವಲಯವೆಂದು ಪರಿಗಣಿಸುವ ಕ್ರಮ ಸರ್ಕಾರದ ಪರಿಶೀಲನೆಯಲ್ಲಿದೆಯೇ ?

ಈ) ಹಾಗಿದ್ದಲ್ಲಿ ಸಂಡೂರು ತಾಲ್ಲೂಕನ್ನು ಸಂಡೂರು ವಲಯವೆಂದು ಘೋಷಿಸಲಾಗುವುದೇ ?

ಶ್ರೀ ಬಿ. ಎ. ಜೀವಿಜಯ (ಅರಣ್ಯ ರಾಜ್ಯ ಸಚಿವರು).—

ಅ) ಸಂಡೂರು ತಾಲ್ಲೂಕಿನ ಒಟ್ಟು ೮೪ ಹಳ್ಳಿಗಳ ಪೈಕಿ ಈ ಕೆಳಕಂಡ ೨೩ ಹಳ್ಳಿಗಳು ಸಂಡೂರು ವಲಯ ವ್ಯಾಪ್ತಿಯಲ್ಲಿ ಬರುತ್ತದೆ.—

೧ ಕೃಷ್ಣಾನಗರ
೨ ಮುರಾರಿಪುರ
೩ ದವಲತ್‌ಪುರ
೪ ಎನ್. ಇ. ಬ್ಲಾಕ್ (ಓ.ಎಸ್.)
೫ ಸುಶೀಲನಗರ
೬ ರಾಮಗಡ
೭ ರಾಮನಮಲೈ ಬ್ಲಾಕ್ (ಎಫ್)
೮ ಎಮ್. ಇ. ಹಬ್ಬಿ
೯ ಸಿದ್ದಾಪುರ
೧೦ ಜೈಸಿಂಗಪುರ
೧೧ ತಾರಾನಗರ
೧೨ ಭುಜಂಗ ನಗರ
೧೩ ನಾರಾಯಣಪುರ
೧೪ ವಿಠಲಾ ನಗರ
೧೫ ನರಸಾಗಪುರ
೧೬ ರಣಜೀತಪುರ
೧೭ ದೋಣಿಮಲೈ
೧೮ ಉಬ್ಬಲಗುಂಡಿ
೧೯ ರಾಜಾಪುರ
೨೦ ಯಶವಂತನಗರ
೨೧ ಕಾರ್ಕಿಡೇಶ್ವರ (ಎಸ್. ಬಿ. ಹಳ್ಳಿ)
೨೨ ಸ್ವಾಮಿಮಲೈ ಬ್ಲಾಕ್
೨೩ ದೇವಗಿರಿ

ಸಂಡೂರು ತಾಲ್ಲೂಕಿನ ಇನ್ನುಳಿದ ೬೧ ಹಳ್ಳಿಗಳ ಪೈಕಿ ಈ ಕೆಳಕಂಡ ಹಳ್ಳಿಗಳು ಹೊಸಪೇಟೆ ವಲಯದ ವ್ಯಾಪ್ತಿಯಲ್ಲಿ ಬರುತ್ತದೆ.

೧ ಹನುಮನಹಳ್ಳಿ
೨ ದೇವರಮಲ್ಲಾಪುರ
೩ ರಾಮಸಾಗರ
೪ ತಿಮ್ಮಲಾಪುರ
೫ ಜೋಗ
೬ ನಾಗಲಪುರ
೭ ಎಸ್. ಗಂಗಾಪುರ
೮ ಬನ್ನಿಹಟ್ಟಿ
೯ ಬಸಾಪುರ
೧೦ ಮುನಿನಾಯಕನಹಳ್ಳಿ (ಬಿಸಿ)
೧೧ ರಾಧಾನಗರ (ಬಿ.ಸಿ.)

ಕೂಡ್ಲಿಗಿ ವಲಯದಲ್ಲಿ ಈ ಕೆಳಗೆ ನಮೂದಿಸಿರುವ ಸಂಡೂರು ತಾಲ್ಲೂಕಿನ ೨೯ ಹಳ್ಳಿಗಳು ಸೇರಿವೆ.

೧ ಹುಂಕಮ್ಮನ ಹಾಳು
೨ ಸೋಮಲಾಪುರ
೩ ಬಂಡ್ರಿ
೪ ಕಾಳಿಂಗೇರಿ
೫ ಚಿಕ್ಕಕೆರೆಯಾಗಿನಹಳ್ಳಿ
೬ ಹಿರಿಕೆರೆಯಾಗಿನಹಳ್ಳಿ
೭ ನಿದು ಗುಂಟೆ (ಕಾಟನ ತಂಬ)
೮ ಹುಲಿಕೊಂಟ
೯ ಬೋರನೂರು
೧೦ ಜೀಗೆ ಹಳ್ಳಿ
೧೧ ಶಲಿಯಪ್ಪನಹಳಿ
೧೨ ಅಗ್ರಹಾರ (ಗಣತಿಕಟ್ಟೆ)
೧೩ ಸೋವೆಹಳ್ಳಿ
೧೪ ತಿಪ್ಪನಮರಡಿ
೧೫ ಮಲ್ಲಾಪುರ
೧೬ ಬೊಮ್ಮಗಟ್ಟಿ
೧೭ ಜೋಡಿ ಕಸನಾಯಕನಹಳ್ಳಿ
೧೮ ಗೌರೀಪುರ
೧೯ ದೇವರಗುಡ್ಡನಹಳ್ಳಿ
೨೦ ಎಸ್. ಓಬಳಾಪುರ
೨೧ ಎರ್ರಯ್ಯನಹಳ್ಳಿ
೨೨ ಗೊಲ್ಲ ಲಿಂಗಮ್ಮನಹಳ್ಳಿ
೨೩ ಕೊಣಸಿಗೆರೆ
೨೪ ಕನಕಪುರ (ಬಿ.ಸಿ.) (ನಾಗೇನಹಳ್ಳಿ)
೨೫ ಎಸ್. ತಿಮ್ಮಪ್ಪನಹಳ್ಳಿ (ಬಿ.ಸಿ.)
೨೬ ಜೋಡಿಬೊಮ್ಮನಹಳ್ಳಿ (ಬಿ.ಸಿ.)
೨೭ ವಿಠಲಾಪುರ
೨೮ ಗೌರೀಪುರ (ಬಿ.ಸಿ.)
೨೯ ಶಂಕರಪುರ (ಬಿ.ಸಿ.)

ಸಂಡೂರು ತಾಲ್ಲೂಕಿನ ಇನ್ನುಳಿದ ೨೧ಹಳ್ಳಿಗಳು ಬಳ್ಳಾರಿ ವಲಯಕ್ಕೆ ಸೇರಿದ ಅವುಗಳು ಯಾವುವೆಂದರೆ.–

೧ ಮೇಟ್ರಿಕಿ
೨ ಗುಂಡಲಹಳ್ಳಿ
೩ ಎಮ್. ಗಂಗಲಾಪುರ
೪ ಲಕ್ಕಲಹಳ್ಳಿ
೫ ಮಲ್ಲಾಪುರ
೬ ಲಿಂಗದಹಳ್ಳಿ
೭ ಕೋದಾಳ
೮ ಮಲ್ಲಾಪುರ ಮರುಟ್ಲಿ
೯ ಹಂತಾಪುರ
೧೦ ಚಿಕ್ಕಹಂತಾಪುರ
೧೧ ಸುಲ್ತಾನಪುರ (ಎಕ್ರೋಬನಹಳ್ಳಿ)

೧೨ ಹಾವಿನ ಮೊಡಗು
೧೩ ಕಂಮಟ
೧೪ ರಾಮಪುರ
೧೫ ಅಪ್ಪಲಾಪುರ (ಬಿ.ಸಿ.)
೧೬ ಐಯ್ಯನಹಳ್ಳಿ (ಬಿ.ಸಿ.)
೧೭ ತೋರಣಗಲ್
೧೮ ವಡ್ಡು
೧೯ ತಾಳೂರು
೨೦ ದರೋಜಿ
೨೧ ಕುರೆಕೊಪ್ಪ

ಅ) ಸಂಡೂರು ತಾಲ್ಲೂಕಿನ ೮೪ ಹಳ್ಳಿಗಳ ಪೈಕಿ ೨೩ ಹಳ್ಳಿಗಳು ಸಂಡೂರು ವಲಯದ ವ್ಯಾಪ್ತಿಯಲ್ಲಿ ಬರುತ್ತದೆ. ಇನ್ನುಳಿದ ಹಳ್ಳಿಗಳು ಕೂಡ್ಲಿಗಿ, ಹೊಸಪೇಟೆ ಮತ್ತು ಬಳ್ಳಾರಿ ವಲಯಗಳಿಗೆ ಸೇರಿವೆ. ಸಂಡೂರು ವಲಯದಲ್ಲಿ ೨೩ ಹಳ್ಳಿಗಳನ್ನೊಳಗೊಂಡ ಒಂದು ಅರಣ್ಯ ಪ್ರದೇಶವು ೩೦೬೫೯.೦೧ ಹೆಕ್ಟೇರ್. ಸಂಡೂರು ತಾಲ್ಲೂಕಿನ ೨೩ ಹಳ್ಳಿಗಳನ್ನೊಳಗೊಂಡ ಸಂಡೂರು ಅರಣ್ಯ ವಲಯವು ಅತ್ಯಂತ ಬೆಲೆಬಾಳುವ ಶ್ರೀಗಂಧದ ಮರವನ್ನು ಹೇರಳವಾಗಿ ಹೊಂದಿರುವುದರಿಂದ ಅದರ ರಕ್ಷಣೆಗೆ ಕ್ರಮ ತೆಗೆದುಕೊಳ್ಳಲಾಗಿದೆ. ಇದ್ದರಿಂದ ಈ ವಲಯವನ್ನು ಶ್ರೀಗಂಧದ ಸೀಮಾ ಪ್ರದೇಶವೆಂದು ಪರಿಗಣಿಸಿ ಅದರ ರಕ್ಷಣೆ ಮತ್ತು ಪೋಷಣೆಗೆ ಸ್ಥಿರೀಕರಿಸಲಾಗಿದೆ. ಈ ಮೇಲೆ ತಿಳಿಸಿದ ಮುಖ್ಯ ಕಾರಣದಿಂದಾಗಿ ಸಂಡೂರು ತಾಲ್ಲೂಕಿನ ಇನ್ನುಳಿದ ಹಳ್ಳಿಗಳನ್ನು ಈ ವಲಯ ವ್ಯಾಪ್ತಿಯಲ್ಲಿ ಸೇರಿಸಲಾಗಿಲ್ಲ.

ಇ) ಸಧ್ಯಕ್ಕೆ ಅಂಥಹ ಯಾವುದೇ ಪ್ರಸ್ತಾವನೆಯು ಇರುವುದಿಲ್ಲ.

ಈ) ಇದು ಉದ್ಭವಿಸುವುದಿಲ್ಲ.

ಕೃಷ್ಣಾ ಮೇಲ್ದಂಡೆ ಯೋಜನೆಯ ಬಗ್ಗೆ

೭೧೨. ಶ್ರೀ ಎಂ. ವೀರಯ್ಯಸ್ವಾಮಿ ಚಿಂಚೋಳ್ಳಿ).— ಮಾನ್ಯ ಲೋಕೋಪಯೋಗಿ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸರ್ಕಾರವು ಕೃಷ್ಣಾ ಮೇಲ್ದಂಡೆ ಯೋಜನೆಯ ಎರಡನೇ ಘಟ್ಟಕ್ಕೆ ಕೇಂದ್ರ ಸರ್ಕಾರದಿಂದ ಅಂಗೀಕಾರವನ್ನು ಸ್ವೀಕರಿಸಿದೆಯೆ ?

ಆ) ಇಲ್ಲದಿದ್ದಲ್ಲಿ, ಅಂಗೀಕಾರಕ್ಕಾಗಿ ಯೋಜನೆಯು ಎಂದಿನಿಂದ ಕೇಂದ್ರದಲ್ಲಿ ಉಳಿದಿದೆ ಹಾಗೂ ವಿಳಂಬಕ್ಕೆ ಕಾರಣಗಳೇನು.

ಇ) ೧೯೮೪-೮೫ನೇ ಸಾಲಿನ ದರದಂತೆ ಕೃಷ್ಣಾ ಮೇಲ್ದಂಡೆ ಯೋಜನೆಯು ಎರಡನೇ ಘಟ್ಟದ ಒಟ್ಟು ಅಂದಾಜು ವೆಚ್ಚ ?

ಈ) ಕೃಷ್ಣಾ ಮೇಲ್ದಂಡೆ ಯೋಜನೆಯ ಮೊದಲನೇ ಘಟ್ಟದ ಪರಿಷ್ಕೃತ ಅಂದಾಜು ಹಾಗೂ ೧೯೮೫ರ ಮಾರ್ಚ್ ಅಂತ್ಯದವರೆಗೆ ಆದ ವೆಚ್ಚ ?

ಉ) ಸರ್ಕಾರವು ಕೃಷ್ಣಾ ಮೇಲ್ದಂಡೆ ಯೋಜನೆಯ ಮೊದಲ ಘಟ್ಟವನ್ನು ಪೂರ್ಣಗೊಳಿಸಲು ಏನಾದರೂ ಕಾರ್ಯಕ್ರಮ ಹಾಕಿಕೊಂಡಿದೆಯೇ ಮತ್ತು ಅದನ್ನು ಪೂರ್ಣಗೊಳಿಸಲು ಬೇಕಾದ ಕಾಲ ಹಾಗೂ ಪ್ರಯೋಜನ ಪಡೆಯುವ ಒಟ್ಟು ವಿಸ್ತೀರ್ಣ ?

ಊ) ಕೃಷ್ಣಾ ಮೇಲ್ದಂಡೆ ಯೋಜನೆಗೆ ವಿಶ್ವಬ್ಯಾಂಕ್‌ನವರು ಅಧಿಕ ೧೫೦ ಕೋಟಿ ರೂ.ಗಳನ್ನು ಕೊಡಲು ಇತ್ತೀಚೆಗೆ ಒಪ್ಪಿರುವುದು ನಿಜವೇ ಮತ್ತು ಪ್ರಸ್ತಾವನೆಯು ಯಾವ ಹಂತದಲ್ಲಿ ಉಳಿದಿದೆ, ಹಾಗೂ ನೆರವು ಯಾವಾಗ ದೊರಕುತ್ತದೆ ಮತ್ತು ಈ ಕಾರಣವನ್ನು ಉಪಯೋಗಿಸಿಕೊಳ್ಳಲು ಹಾಕಿಕೊಂಡಿರುವ ಬಹುದಾದ ಕಾರ್ಯಕ್ರಮದ ವಿವರಗಳು.